ಅವರು ಮೊಣಕಾಲುಗಳನ್ನು ಮತ್ತೂ ಹತ್ತಿರಕ್ಕೆ ಮಡಚಿಕೊಂಡು ದೀರ್ಘವಾಗಿ ಅವಮಾನಕರವಾದ ಆಲೋಚನೆಗಳ ಸರಣಿಯಲ್ಲಿ ಮುಳುಗಿದರು. ಅವಳು ಹಾಗೆಯೇ ಮಾತನಾಡುತ್ತಿದ್ದಳು.

‘ಈ ಮೂಲೆಯಲ್ಲಿ ಭಯವಿಲ್ಲ. ಸ್ವಾಮಿಗಳಿಗೆ ಮನೆಯಲ್ಲಿ ಒಳ್ಳೆಯ ಹೆಣ್ಣುಮಕ್ಕಳಿರುತ್ತಾರೆ. ಸ್ವಾಮಿಗಳು ಅವರನ್ನು ನೆನಪಿಸಿಕೊಳ್ಳುತ್ತಿರುತ್ತಾರೆ. ನಮ್ಮ ಗುಡಿಸಲು ಹಾರಿ ಹೋಗಿರುತ್ತದೆ. ನಮ್ಮ ಮಕ್ಕಳೇನಾಗಿರುವರೋ! ನೆರೆಹೊರೆಯವರು ನೋಡಿಕೊಂಡಿರುತ್ತಾರೆ ಬಿಡಿ. ನಮ್ಮವನು ದೊಡ್ಡ ಮೂಳ. ಯಾವ ಕೆಲಸಕ್ಕೂ ಬಾರದವನು. ಚೆನ್ನಾಗಿ ಕುಡಿದು ಮಲಗಿದರೆ ಗುಡಿಸಲು ಹಾರಿಹೋದರೂ ಅವನಿಗೇನು ಗೊತ್ತಾಗುತ್ತೆ? ಮಕ್ಕಳು ಹೇಗಿರುವರೋ ಏನೋ?’

ಒಂದು ಮಾನವ ಹೃದಯದಾಳದಿಂದ ಹೊರ ಬಂದ ಈ ಆವೇದನೆಯನ್ನು ಕೇಳುತ್ತಿದ್ದರೆ ಅವರ ಮನಸ್ಸು ಸುತ್ತ ಇಟ್ಟುಕೊಂಡಿದ್ದ ಗೋಡೆಗಳೆಲ್ಲ ಕರಗಿಹೋದವು. ಅತಿ ನೋವಿನಿಂದ ಆ ತಿರುಕಿಯನ್ನು ಗಟ್ಟಿಯಾಗಿ ಆಲಿಂಗಿಸಿಕೊಂಡರು. ಅವರ ವೇದನೆ ತನಗೆ ಅರ್ಥವಾದಂತೆ ಅವರ ಮೊಣಕಾಲಿನ ಮೇಲೆ ಮೆಲ್ಲಗೆ ತಟ್ಟಿದಳು. ಅವರ ಮನಸ್ಸು ಕ್ರಮದಲ್ಲಿ ಆಲೋಚಿಸುವುದನ್ನು ಬಿಟ್ಟಿತು. ಗಾಳಿ ಮಾಡುತ್ತಿದ್ದ ಕೊನೆಯಿಲ್ಲದ ಆರ್ಭಟ ಮನದ ಗಡಿಗೆ ಹೋಯಿತು. ಅವರ ಕಾಲಮೇಲೆ, ಎದೆಯ ಮೇಲೆ ಒರಗಿದ್ದ ಮಾನವ ದೇಹದ ಸುಖೋಷ್ಣವೊಂದೇ ಅವರಿಗೆ ನೆನಪು.

ಕಾಲ ಬಹು ನಿಧಾನ ಚಲಿಸುತ್ತಿತ್ತು. ಆದರೆ ಆ ವಿಷಯ ರಾವು ಅವರಿಗೆ ತಿಳಿಯದು. ಚಂಡಮಾರುತದ ಬಲ ವೃದ್ಧಿಸಿತು. ಎಲ್ಲ ದಿಸೆಗಳಿಂದ ದೊಡ್ಡ ದೊಡ್ಡ ಶಬ್ದಗಳು ಕೇಳಿಸುತ್ತಿದ್ದವು. ಸ್ವಲ್ಪ ಹಿಂದುಮುಂದು ಛಾವಣಿಯ ಹೆಂಚುಗಳೆಲ್ಲ ಗಾಳಿಗೆ ಹಾರಿಹೋಗಿದ್ದವು. ಆದರೆ ಗಾಳಿಯಿಂದಾಗಿ ಮಳೆ ಅವರಿಬ್ಬರಿಂದ ದೂರವಾಗಿ ಇನ್ನೊಂದು ಪಕ್ಕದಲ್ಲಿ ಸುರಿಯುತ್ತಿತ್ತು.



ಸ್ವಲ್ಪ ಹೊತ್ತಿಗೆ ರಾವು ಅವರ ಕಾಲುಗಳಲ್ಲಿ ಕೆರೆತ ಉಂಟಾಯಿತು. ಮಲಗಿದ್ದ ಆ ಮೂರ್ತಿ ಕದಲದಂತೆ ನಿಧಾನವಾಗಿ ತಮ್ಮ ಕಾಲುಗಳನ್ನು ಹಿಂದಕ್ಕೆಳೆದುಕೊಂಡರು. ಸಾವಕಾಶವಾಗಿ ಮನಸ್ಸು ಎಚ್ಚರಗೊಂಡಿತು. ಟಾರ್ಚನ್ನು ಬೆಳಗಿಸಿ ಅವಳ ಮುಖದತ್ತ ನೋಡಿದರು. ನಿದ್ದೆಯಲ್ಲಿ ಆ ಮುಖ ಮುಗ್ಧವಾಗಿ, ನಿಶ್ಚಿಂತೆಯಿಂದಿತ್ತು. ಸ್ವಚ್ಛವಾದ, ಸಹಜವಾದೊಂದು ಶೋಭೆ ಆ ಮುಖದಲ್ಲಿ ದಿವ್ಯತ್ವವನ್ನು ಸ್ಫುರಿಸುತ್ತಿತ್ತು.

ರಾವು ಅವರಿಗೆ ಮತ್ತೆ ಎಚ್ಚರವಾಗುವ ವೇಳೆಗೆ ಮಳೆ ಕಡಿಮೆಯಾಗಿತ್ತು. ಗಾಳಿ ಮಾತ್ರ ಬಲವಾಗಿ ಬೀಸುತ್ತಿತ್ತು. ತಿರುಕಿ ಎದ್ದು ಹೊರಟು ಹೋಗಿದ್ದಳು. ಗಡಿಯಾರದತ್ತ ನೋಡಿದರು. ಐದು ಗಂಟೆಯಾಗಿತ್ತು. ಎದ್ದು ನಿಂತರು. ಮಂಡಿ ಬಿಗಿದುಕೊಂಡಿತ್ತು. ಅಂದುಕೊಳ್ಳದೆಯೇ ಜೇಬುಗಳನ್ನು ಮುಟ್ಟಿಕೊಂಡರು.

ಅವರಿಂದ ಹೊರಟ ಮೊದಲ ಮಾತು, ‘ಕಳ್ಳಮುಂಡೆ!’

ಆದರೆ ಅವಳು ಕಳ್ಳತನ ಮಾಡಿರುವಳು ಅಂದುಕೊಳ್ಳುವುದು ಅವರಿಗೆ ಇಷ್ಟವಿರಲಿಲ್ಲ. ಕೋಣೆಯ ನಾಲ್ಕು ಮೂಲೆಗಳಲ್ಲೂ ಹುಡುಕಿದರು. ಕಳೆದ ರಾತ್ರಿ ಗಾಬರಿಯಲ್ಲಿದ್ದಾಗ ಎಲ್ಲಿಯಾದರೂ ಬಿದ್ದಿರಬೇಕೆಂದುಕೊಂಡರು. ಕೋಣೆಯಿಂದ ಹೊರಬಂದರು. ಹೊರಗಿನ ದೃಶ್ಯ ಬೀಭತ್ಸಕರವಾಗಿತ್ತು. ಪ್ಲಾಟ್‌ಫಾರಂ ಬಿಟ್ಟರೆ ಸುತ್ತೆಲ್ಲ ಜಲಮಯ. ಕೆಲವರು ದೂರವಾಗಿ ರೈಲು ದಾರಿ ಹಿಡಿದು ನಡೆದು ಬರುತ್ತಿದ್ದರು. ಬಹುಶಃ ಊರಿನಿಂದಿರಬಹುದು. ಪೆಟ್ಟು ಬಿದ್ದ ಕೆಲವರು ನಿಲ್ದಾಣದ ಇನ್ನೊಂದು ಬದಿಯಲ್ಲಿ ನೆಲದ ಮೇಲೆ